ಕ್ರ ಸಂ.	ವರ್ಷ	ಘಟಕಗಳ ಸಂಖ್ಯೆ	ಮೊತ್ತ (ರೂ. ಲಕ್ಷದಲ್ಲಿ)
೧	೨೦೦೦–೨೦೦೧	೩೬೯	೫೪೨.೮೭
೨	೨೦೦೧–೦೨	೨೫೦೭	೩೪೫೭.೧೪
೩	೨೦೦೨–೦೩	೩೦೮	೫೦೧.೫೧
೪	೨೦೦೩–೦೪	ಇಲ್ಲ	ಇಲ್ಲ
೫	೨೦೦೪–೦೫	೬೮೬೫	೮೧೦೦.೦೦
೬	೨೦೦೫–೦೬ ಜೂನ್ ಅಂತ್ಯದವರೆಗೆ	೭೯೭	೭೨೫ (ಬಿಡುಗಡೆಯಾದ ರೂ.೬೫೦೦ ಲಕ್ಷಗಳಲ್ಲಿ)

ದಿನಾಂಕ ೧.೧.೯೯ ರಿಂದ ೩೧.೩.೨೦೦೦ ರವರೆಗೆ ಬಾಕಿ ಇರುವ ಶೇ. ೫೦ರಷ್ಟು ಮೊತ್ತವನ್ನು ಈ ಮಾಹೆಯಲ್ಲಿ ಬಿಡುಗಡೆಗೊಳಿಸಲು ಸರಕಾರದ ಆದೇಶವನ್ನು ದಿನಾಂಕ : ೪/೭/೨೦೦೫ ರಂದು ಹೊರಡಿಸಲಾಗಿದೆ. ೨೦೦೫–೦೬ನೇ ವರ್ಷದ ಆಯವ್ಯಯದಲ್ಲಿ ಒಟ್ಟು ರೂ. ೧೫೦೦ ಲಕ್ಷ ಒದಗಿಸಲಾಗಿದೆ. ಉಳಿದ ಬಾಕಿ ಸಹಾಧನವನ್ನು ೨೦೦೫–೦೬ ಹಾಗೂ ನಂತರದ ಸಾಲುಗಳಲ್ಲಿ ಬಿಡುಗಡೆ ಮಾಡುಲಾಗುವುದು.

ರೇಷ್ಮೆ ಇಲಾಖೆಯ ದಿನಗೂಲಿ ನೌಕರರ ಖಾಯಂ

೫೬೩ (೪೦೮೫) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ೧೦ ವರ್ಷ ಸೇವೆಸಲ್ಲಿಸಿ ಖಾಯಂಗೊಂಡ ನೌಕರರನ್ನು ಹೆಚ್ಚುವರಿ ಹುದ್ದೆಯಲ್ಲಿದ್ದು, ಅವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿ ನೇಮಕಾತಿ ಮಾಡಿ ಆದವರಿಗೆ ಕಾಲಮಿತಿ ಬಡ್ತಿ ನೀಡಲಾಗುವುದೇ ;

ಆ) ಇಲ್ಲದಿದ್ದಲ್ಲಿ, ನೀಡದಿರಲು ಕಾರಣಗಳೇನು, ಸದರಿ ನೌಕರರಿಗೆ ಎಲ್ಲಾ ಸವಲತ್ತು ಗಳನ್ನು ನೀಡುತ್ತಿದ್ದು, ಅವರಿಗೆ ಜೇಷ್ಠತೆ ಎಲ್ಲಿಂದ ನೀಡಲಾಗುವುದು;

ಇ) ಈ ಹಿಂದಿನ ಸೇವೆ ಪರಿಗಣಿಸದಿದ್ದರೆ ನೌಕರರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಒದಗಿಸುವುದು?

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ರೇಷ್ಮೆ ಇಲಾಖೆಯಲ್ಲಿ ೧-೭-೧೯೮೪ ಕ್ಕಿಂತಲೂ ಹಿಂದೆ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ೮೦೧೮ ನೌಕರರ ಪೈಕಿ ೬-೮-೯೦ ರ ಸರ್ಕಾರಿ ಆದೇಶದನ್ವಯ ೨೮೩೮ ನೌಕರರನ್ನು ಗ್ರೂಪ್ - ಸಿ ವೃಂದದಲ್ಲಿ ಹಾಗೂ ೫೧೮೦ ನೌಕರರನ್ನು ಗ್ರೂಪ್-ಡಿ ವೃಂದದಲ್ಲಿ ಸಂಖ್ಯಾತಿರಿಕ್ತ ಹುದ್ದೆಗಳಿಗೆದುರಾಗಿ ಸಕ್ರಮಗೊಳಿಸಲಾಗಿದೆ. ನಂತರ ಸರ್ಕಾರಿ ಆದೇಶ ಸಂಖ್ಯೆ : ಡಿಪಿಎಆರ್ ೨ ಎಸ್ ಎಲ್ ಸಿ ೯೦. ದಿನಾಂಕ ೨೩-೧೧-೯೫ ರನ್ವಯ ಹೆಚ್ಚುವರಿ ನೌಕರರನ್ನು ಸರ್ಕಾರದ ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲು ಜಿಲ್ಲಾಧಿಕಾರಿಗಳ ವಶಕ್ಕೆ ನೀಡಿದೆ. ಈ ಹಂತದಲ್ಲಿ ರೇಷ್ಮೆ ಇಲಾಖೆಯ ಪಾತ್ರ ಕೊನೆ ಗೊಳ್ಳುತ್ತದೆ. ಬೇರೆ ಇಲಾಖೆಗಳಲ್ಲಿ ಖಾಯಂ ಆದಂತಹ ಸಂಖ್ಯಾತಿರಿಕ್ತ ನೌಕರರ ಸೇವಾ ಷರತ್ತು ಹಾಗೂ ಸೌಲಭ್ಯಗಳನ್ನು ಆಯಾ ಇಲಾಖೆಯೇ ನಿರ್ವಹಿಸುತ್ತದೆ. ೮೭ ಗ್ರೂಪ್ - ಸಿ ಮತ್ತು ೨೪ ಗ್ರೂಪ್-ಡಿ ನೌಕರರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಜಿಲ್ಲಾಧಿಕಾರಿಗಳು ಹಂಚಿಕೆ ಮಾಡಿರುತ್ತಾರೆ.

ಆ) ಖಾಲಿಯಾದ ಖಾಯಂ ಹುದ್ದೆಯಲ್ಲಿ ವರದಿ ಮಾಡಿಕೊಂಡ ದಿನಾಂಕದಿಂದ ೧೦ ವರ್ಷ ಸೇವೆ ಪೂರೈಸದಿರುವವರಿಗೆ ಕಾಲಮಿತಿ ಬಡ್ತಿ ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಖಾಲಿಯಾದ ಖಾಯಂ ಹುದ್ದೆಗೆ ಹಾಜರಾದ ದಿನಾಂಕದಿಂದ ಕೆ.ಸಿ.ಎಸ್.ಆರ್ (ಸಿನಿಯಾರಿಟಿ) ನಿಯಮಗಳು ೧೯೫೭ರ ನಿಯಮ ೬ ರನ್ವಯ ಅವರು ಜೇಷ್ಟತೆಯನ್ನು ಪಡೆಯುತ್ತಾರೆ.

ಇ) ಹೌದು, ಆದರೆ ಅಂತಹವರ ಸೇವೆಯನ್ನು ಖಾಲಿಯಾದ ಖಾಯಂ ಹುದ್ದೆಗೆ ಹಾಜರಾದ ದಿನಾಂಕದಿಂದ ಖಾಯಂ ಸೇವೆಯೆಂದು ಪರಿಗಣಿಸಲು ಆದೇಶಗಳಲ್ಲಿ ಅಸ್ಪದವಿದೆಯೇ ಹೊರತು ಅವರು ದಿನಗೂಲಿ ನೌಕರರಾಗಿ ಕೆಲಸಕ್ಕೆ ಸೇರಿದ ವಿವರ ದಿನಾಂಕದಿಂದಲ್ಲ.